ದಿನಾಂಕಃ 17.09.2025

ಎಂ ವಿ ಸಿಃ 655/2022

ಪಿ.ಡಬ್ಲ್ಯೂ 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ

ನಾನು ಓಡಿಸುತ್ತಿದ್ದ ಬೈಕ್ ನನ್ನ ತಂದೆಗೆ ಸೇರಿದ್ದು. ಈಗಲೂ ಸದರಿ ಬೈಕ್ ನನ್ನ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸರಿ. ದಿ.30.07.2020 ರಂದು ಬೈಕ್ ಚಾಲನೆ ಮಾಡಲು ಡಿ.ಎಲ್ ಇರಲಿಲ್ಲ ಎಂದರೆ ಸಾಕ್ಷಿ ನಾನು ಬೈಕ್ ಚಾಲನೆ ಮಾಡುತ್ತಿರಲಿಲ್ಲ, ಗ್ಯಾರೇಜಿಗೆ ತಳ್ಳಿಕೊಂಡು ಹೋಗುತ್ತಿದ್ದೆನು ಎಂದು ಉತ್ತರಿಸುತ್ತಾರೆ. ನಿಮ್ಮ ಬಳಿ ಡಿ.ಎಲ್ ಮತ್ತು ವಿಮೆ ಇರಲಿಲ್ಲವಾದ ಕಾರಣ, ಮೇಲಿನ ರೀತಿ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಡಿಕ್ಕಿ ಪಡಿಸಿದ ಕಾರಿನವರು ನಿಮಗೆ ಪರಿಚಯಸ್ಥರು ಎಂದರೆ ಸಾಕ್ಷಿ ಪರಿಚಯವಿಲ್ಲ ಎಂದು ಉತ್ತರಿಸುತ್ತಾರೆ. ಅಪಘಾತವಾಯಿತು ಎಂದು ಹೇಳುವ ಸಮಯದಲ್ಲಿ ಡಿಕ್ಕಿ ಪಡಿಸಿರುವುದಾಗಿ ಹೇಳುವ ಕಾರು ಅಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಡಿಕ್ಕಿ ಪಡಿಸಿ ಹೊರಟು ಹೋಗಿರುತ್ತದೆ ಎಂದು ಉತ್ತರಿಸುತ್ತಾರೆ. ಡಿಕ್ಕಿ ಪಡಿಸಿ ಹೊರಟುಹೋಗಿರುವುದಾಗಿ ಹೇಳುವ ಕಾರು ಯಾವುದು ಎಂಬುದು ಗುರುತು ನಿಮಗೆ ಗೊತ್ತಿಲ್ಲ, ಹಾಗಾಗಿ ಈ ಕಾರನ್ನು ಸೇರಿಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸ್ಥಳದಲ್ಲಿ ನಿಮ್ಮನ್ನು ಉಪಚರಿಸಿದವರು ನಿಮ್ಮ ಪರಿಚಯದವರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇತ್ತು. ಆಸ್ಪತ್ರೆಯಲ್ಲಿ ಗಾಯಗು ಹೇಗೆ ಆದವು ಎಂದು ನಾನು ಹೇಳಿ ಬರೆಸಿರುವುದಿಲ್ಲ. ಮಂಡ್ಯ ಆಸ್ಪತ್ರೆಯಲ್ಲಿ 5 ದಿನ ಚಿಕಿತ್ಸೆ ಪಡೆದುಕೊಂಡಿರುತ್ತೇನೆ, ಆ ನಂತರ ಆರು ತಿಂಗಳವರೆಗೆ ಪ್ರತಿ 15 ದಿನಗಳಿಗೊಮ್ಮೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಮಂಡ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಏನು ಚಿಕಿತ್ಸೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಬಾಲಕಾಲಿನ ತೊಡೆಯ ಮೂಳೆ ಮುರಿತ ಉಂಟಾಗಿತ್ತು, ಅದಕ್ಕೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನನಗೆ ಚಿಕಿತ್ಸೆ ನೀಡಿದವೈದ್ಯರ ಹೆಸರು ಗೊತಿತಲ್ಲ. ಇತ್ತೀಚೆಗೆ ನಾನು 2 ತಿಂಗಳ ಹಿಂದೆ ಚಿಕಿತ್ಸೆಗೆ ಹೋಗಿರುತ್ತೇನೆ. ಇತ್ತೀಚೆಗೆ ವೈದ್ಯರು ಪರೀಕ್ಷಿಸಿ ಬಲಕಾಲಿನ ಮೂಳೆ ಸಂಪೂರ್ಣವಾಗಿ ಕೂಡಿಕೊಂಡಿದೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು

ಉತ್ತರಿಸುತ್ತಾರೆ. ಚಿಕಿತ್ಸೆಗಾಗಿ ರೂ.50 ಸಾವಿರ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಲಕಾಲಿನ ತೊಡೆಯ ಮೂಳೆ ಮುರಿತ ಉಂಟಾಗಿದ್ದ ಬಗ್ಗೆ ಎಕ್ಸ್ ರೇ ತೆಗೆಸಿರುತ್ತೇನೆ. ಮೂಳೆ ಮುರಿತ ಉಂಟಾಗಿದ್ದಲ್ಲಿ ಎಕ್ಸ್ ರೇ ಹಾಜರು ಪಡಿಸುತ್ತಿದ್ದಿರಿ, ಆದರೆ ಮೂಳೆ ಮುರಿತ ಆಗಿಲ್ಲದೇ ಇರುವ ಕಾರಣ ಯಾವುದೇ ಎಕ್ಸ್ ರೇ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಎಕ್ಸ್ ರೇ ಮಾಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಜೊತೆಯಲ್ಲಿ ಇದ್ದವರಿಗೆ ಆಹಾರ ಇತ್ಯಾದಿ ಖರ್ಚು ವೆಚ್ಚಕ್ಕೆ ರೂ.25 ಸಾವಿರ ಖರ್ಚಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರು ತಿಂಗಳವರೆಗೆ ವಿಶ್ರಾಂತಿ ಪಡೆಯುತ್ತಿದ್ದೆ, 15 ದಿನಗಳಿಗೊಮ್ಮೆ ಚಿಕಿತ್ಸೆ ಪಡೆಯುತ್ತಿದ್ದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗ ಗ್ಯಾರೇಜ್ ಕೆಲಸಕ್ಕೆ ಹೋಗುತ್ತಿದ್ದೇನೆ, ತಿಂಗಳಿಗೆ ರೂ.10000/- ಆದಾಯ ಬರುತ್ತದೆ. ಅದಕ್ಕಿಂತ ಹೆಚ್ಚಿನ ಆದಾಯ ಪಡೆಯುತ್ತಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಗ್ಯವಾಗಿದ್ದೀರಿ ಎಂದರೆ ಸಾಕ್ಷಿ ಆರೋಗ್ಯವಾಗಿದ್ದೇನೆ ಆದರೆ ಕಾಲು ನೋವು ಬರುತ್ತದೆ, ಮೊದಲಿನ ರೀತಿ ಕೆಲಸ ಮಾಡಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ನನಗೆ ಸಣ್ಣ ಪುಟ್ಟ ತರಚಿದ ಗಾಯಗಳು ಮಾತ್ರ ಆಗಿತ್ತು, ಯಾವುದೇ ಶಸ್ತ್ರ ಚಿಕಿತ್ಸೆಗೆ ಒಳಪಡುವಂತಹ ಗಾಯಗಳು ಆಗಿರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಹಾಜರು ಪಡಿಸಿರುವ ಬಿಲ್ ಗಳಿಗೆ ಸಲಹಾ ಚೀಟಿಗಳು ಇರುವುದಿಲ್ಲ, ಅವು ಈ ಕೇಸಿಗೊಸ್ಕರ ಸೃಷ್ಟಿಸಿ ಹಾಜರು ಪಡಿಸಿರುವ ಬಿಲ್ ಗಳು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಆ ದಿನ ನೀವು ಬೈಕ್ ಚಲಾಯಿಸುತ್ತಿದ್ದರೂ ಸಹ ತಳ್ಳಿಕೊಂಡು ಹೋಗುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ಇಲ್ಲ, ಬೈಕ್ ಸ್ಟಾರ್ಟ್ ಆಗುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಡಿ.ಎಲ್ ಇರಲಿಲ್ಲ, ಬೈಕಿಗೆ ವಿಮೆಯೂ ಇರಲಿಲ್ಲ, ನೀವೇ ಚಲಾಯಿಸಿಕೊಂಡು ಹೊಗುವಾಗ ಬಿದ್ದು, ಗಾಯಗೊಂಡಿದ್ದರೂ ಸಹ ಕಾರು ಡಿಕ್ಕಿ ಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನನಗೆ ಯಾವುದೇ ಶಾಶ್ವತ ಅಂಗ ನ್ಯೂನ್ಯತೆ ಅಗಿಲ್ಲ ಎಂದರೆ ಸರಿಯಲ್ಲ. ದೂರನ್ನು ನಮ್ಮ ಮನೆಯುವರು ಕೊಟ್ಟಿದ್ದಾರೆ. ದೂರನ್ನು ತಡವಾಗಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಾವು ಆಸ್ಪತ್ರೆಯಲ್ಲಿ ಇದ್ದೆವು ಎಂದು ಉತ್ತರಿಸುತ್ತಾರೆ. ಹೇಗಾದರು ಮಾಡಿ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಕಾರಿನವರ ಜೊತೆ ಶರೀಕಾಗಿ ಸಮಾಲೋಚನೆ ನಡೆಸಿ ಆ ನಂತರ ಬಂದು

ದೂರು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಕಾರಿನಿಂದ ಯಾವುದೇ ಅಪಘಾತವಾಗಿಲ್ಲದೇ ಇರುವ ಕಾರಣ ವಿಮಾ ಕಂಪನಿಯವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸಾಕ್ಷಿ ಕಾರಿನವರೇ ಡಿಕ್ಕಿ ಪಡಿಸಿರುವುದು ಎಂದು ಉತ್ತರಿಸುತ್ತಾರೆ. ನಿಮ್ಮ ಅಜಾಗರೂಕತೆ ಮತ್ತು ನಿರ್ಲಕ್ಷ್ಯತೆಯಿಂದ ವೇಗವಾಗಿ ಬೈಕ್ ಚಲಾಯಿಸಿಕೊಂಡು ಹೋಗಿ ಬಿದ್ದು ಗಾಯಗೊಂಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ
ಮದ್ದೂರು.